ನಂತರ ಅವರಿಗೆ ಮನೆ ಮಠವನ್ನು ನಿರಾಕರಿಸುತ್ತಾ, ಅವರನ್ನು ಆಶ್ರಯ ಹೀನರನ್ನಾಗಿ ಮಾಡುತ್ತಾ ತಾವು ಮಾಡಿದ್ದೇ ಸರಿ ಎಂದು ಸಾಧಿಸುತ್ತಾರೆ. ರಾಜಾರೋಷವಾಗಿ ನೀನು ಮತ್ತು ನಿನ್ನಂತಹವರು ಮಾಡುತ್ತಿರುವ ಈ ಕ್ರಮಗಳ ಮೂಲಕ ಇಡೀ ಮುಸ್ಲಿಂ ಸಮುದಾಯಕ್ಕೆ ಕಳಂಕವನ್ನು ತರುತ್ತಾ ಇರುವುದರಲ್ಲಿ ನಿಮ್ಮ ಪಾತ್ರಗಳ ಪುನರ್ವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಅನಿಸುವುದಿಲ್ಲವೇ?

ನೀನು ಬೇರೆ ಸಮುದಾಯದ ಮಹಿಳೆಯನ್ನು ಮದುವೆ ಮಾಡಿಕೊಂಡಲ್ಲಿ ನನ್ನನ್ನು ಯಾರು ಮದುವೆ ಮಾಡಿಕೊಳ್ಳಬೇಕು? ನನಗಿರುವ ಅವಕಾಶಗಳೇನು?

ಈಗ ಆಗುತ್ತಿರುವ ಗೊಂದಲಗಳನ್ನಾದರೂ ತಮ್ಮ ಹೆಂಡಂದಿರನ್ನು ಮತ್ತು ಮಕ್ಕಳನ್ನು ಬೀದಿಪಾಲು ಮಾಡಿದ ನೀನು ಮತ್ತು ನಿಮ್ಮಂತಹವರು ಅವರಿಗೆ ಜೀವನಾಂಶವನ್ನು ಕೊಡಬೇಕು ಎಂದು ಆದೇಶ ಮಾಡಿದಾಗ ಇಡೀ ದೇಶದಾದ್ಯಂತ ಪ್ರತಿಭಟನೆಯನ್ನು ಮಾಡುವ ತಾಕತ್ತು ಮತ್ತು ನೈತಿಕತೆ ನಿಮಗೆ ಹೇಗೆ ಬಂತು? ಕುಂತಲ್ಲಿ ನಿಂತಲ್ಲಿ ಕಾರ್ಡ್‌ಲ್ಲಿ ಫೋನಲ್ಲಿ ಫೇಸ್‌ಬುಕ್ ಮೂಲಕ ತಲಾಖ್ ಹೇಳುವ ನಿಮ್ಮ ಕೆಟ್ಟ ಚಾಳಿಗೆ ಪ್ರತಿಯಾಗಿ ಏಕಕಾಲದಲ್ಲಿ ತ್ರಿವಳಿ ತಲಾಖ್ ನೀಡುವುದು ಅಪರಾಧ ಎಂದಾಗುತ್ತಿದೆ. ಬೇರೆ ಧರ್ಮದ ಮಹಿಳೆಯನ್ನು ನೀವು ಯರ್‍ರಾ ಬಿರ್‍ರಿ ಮದುವೆ ಮಾಡಿಕೊಳ್ಳುವ ಕ್ರಮಕ್ಕೂ ಇಡೀ ಸಮುದಾಯಕ್ಕೆ ಅಪಮಾನಕಾರಿಯಾದ ಚಿತ್ರ ವಿಚಿತ್ರ ಹೆಸರುಗಳನ್ನು ಕೊಡುತ್ತಿದ್ದಾರೆ. ಈ ರೀತಿಯಲ್ಲಿ ಮದುವೆಗೋಸ್ಕರ ಮತಾಂತರವಾಗುವ ಕೃತ್ಯವು ಸಜೆಗೆ ಅರ್ಹವಾದ ದುಷ್ಕೃತ್ಯ ಎಂಬುದನ್ನು ಅವರು ಸಾಬೀತುಗೊಳಿಸುತ್ತಿದ್ದಾರೆ. ಮುಸ್ಲಿಂ ಸಮುದಾಯದ ಹಿರಿಮೆಯನ್ನು ಪ್ರಪಂಚಕ್ಕೆ ಸಾರುತ್ತೇವೆ ಎಂದು ಹೊರಟ ನಿಮ್ಮಲ್ಲಿ ಅನೇಕ ಮುಸ್ಲಿಮರು ಇಸ್ಲಾಂ ಧರ್ಮದ ವ್ಯವಸ್ಥೆಯನ್ನು ತಮ್ಮ ಇರುವಿಕೆಯಿಂದ ತಮ್ಮ ಅನ್ಯಾಯ ಅಕ್ರಮಗಳಿಂದ ಈ ಮಟ್ಟಕ್ಕೆ ತಂದಿರುವರಲ್ಲಾ... ಆಂ? ಇದನ್ನು ನಾನು ಪ್ರಶ್ನೆ ಮಾಡಬಹುದಾದ ಸಾಧ್ಯತೆ ಮತ್ತು ಅರ್ಹತೆ ನನಗೆ ಇದೆಯಾ ಇಲ್ಲವಾ? ಇಲ್ಲಿಂದ ನನ್ನ ಮತ್ತು ನಿನ್ನ ಸವಾಲ್–ಜವಾಬ್ ಆರಂಭವಾಗುತ್ತದೆ. ಇದು ಆರಂಭ ಮಾತ್ರ; ಇತಿಹಾಸದುದ್ದಕ್ಕೂ ನೀನು ಉತ್ತರಿಸುತ್ತಲೇ ಮತ್ತು ಉತ್ತರಿಸುತ್ತಲೇ ಹೋಗಬೇಕಾಗುತ್ತದೆ ಎಂಬ ಮಾತನ್ನು ಹೇಳುತ್ತಾ,

ಇಂತಿ

ನಬೀಲ

## ಬಾನು ಮುಷ್ತಾಕ್

ವಕೀಲರಾಗಿರುವ ಬಾನು ಮುಷ್ತಾಕ್ ಹಾಸನದಲ್ಲಿ ನೆಲೆಸಿದ್ದಾರೆ. ಬಿ.ಎಸ್ಸಿ, ಎಲ್.ಎಲ್.ಬಿ ಪದವೀಧರೆ. 'ಹೆಜ್ಜೆ ಮೂಡಿದ ಹಾದಿ', 'ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ', 'ಬಡವರ ಮಗಳು ಹೆಣ್ಣಲ್ಲ', 'ಹಸೀನಾ ಮತ್ತು ಇತರ ಕತೆಗಳು' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಹೂ ಕಣಿವೆಯ ಚಾರಣ', 'ಇಬ್ಬನಿಯ ಕಾವು' ಎಂಬ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿರುವ ಅವರ ಕವನ ಸಂಗ್ರಹ – 'ಒದ್ದೆ ಕಣ್ಣಿನ ಬಾಗಿನ'. ಬಾನು ಅವರ ಕತೆಗಳು ಹಿಂದಿ, ಮಲಯಾಳಂ, ತಮಿಳು, ಪಂಜಾಬಿ, ಉರ್ದು, ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ. ಅವರ 'ಕರಿನಾಗರಗಳು' ಎಂಬ ಕತೆಯನ್ನು ಆಧರಿಸಿ ಗಿರೀಶ ಕಾಸರವಳ್ಳಿ ಅವರು 'ಹಸೀನಾ' ಸಿನಿಮಾ ನಿರ್ದೇಶಿಸಿದ್ದಾರೆ. ಅದು ಮೂರು ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಆದಿಲ್‌ಶಾಹಿ ಇತಿಹಾಸವನ್ನು ದಾಖಲಿಸುವ 'ತಾರೀಕ್–ಎ–ಫರಿಶ್ತ' ಪುಸ್ತಕವನ್ನು ಉರ್ದುವಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.